# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1245
ಸದಸ್ಯರ ಹೆಸರು : ಶ್ರೀ ಎಂ.ಜಿ. ಮುಳೆ
(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 21.08.2025
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಭಾಲ್ಕಿ ತಾಲೂಕಿನ ಮಾಣಿಕೇಶ್ವರ ಗ್ರಾಮದಲ್ಲಿ ನಿರ್ಮಿಸಲಾಗಿರುವ ಬ್ಯಾರೇಜ್ ಕಾಮಗಾರಿ ಯಾವ ವರ್ಷದಲ್ಲಿ ಪ್ರಾರಂಭವಾಯಿತು: ಈವರೆಗೆ ಶೇಕಡ ಎಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಎಷ್ಟು ಕಾಮಗಾರಿ ಬಾಕಿ ಇದೆ: ಕಾಮಗಾರಿ ವಿಳಂಬವಾಗಲು ಕಾರಣವೇನು: | ಭಾಲ್ಕಿ ತಾಲೂಕಿನ ಮಾಣಿಕೇಶ್ವರ ಗ್ರಾಮದ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಕೃಷ್ಣಾ ಭಾಗ್ಯ ಜಲ ನಿಗಮದ ವತಿಯಿಂದ ಟೆಂಡರ್ ಆಧಾರದ ಮೇಲೆ ದಿನಾಂಕ: 06.06.2006ರಲ್ಲಿ ಗುತ್ತಿಗೆ ವಹಿಸಲಾಗಿದ್ದು, ದಿನಾಂಕ:20.12.2012 ರಂದು ಪೂರ್ಣಗೊಳಿಸಲಾಗಿದೆ. |
| ಆ) | ಈ ಬ್ಯಾರೇಜ್ ಯೋಜನೆಯ ಒಟ್ಟು ಅಂದಾಜು ವೆಚ್ಚ ಎಷ್ಟು: ಇದುವರೆಗೆ ಬಿಡುಗಡೆ ಮಾಡಲಾದ ವೆಚ್ಚದ ಹಾಗೂ ಉಳಿದ ಮೊತ್ತ ಬಿಡುಗಡೆಗೆ ಸಂಬಂಧಿಸಿದ ಪ್ರಕ್ರಿಯೆ ಯಾವ ಹಂತದಲ್ಲಿದೆ: | ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.56.70 ಕೋಟಿ ಇದ್ದು, ರೂ.50.72 ಕೋಟಿ ವೆಚ್ಚವಾಗಿರುತ್ತದೆ. ಸದರಿ ಕಾಮಗಾರಿಯು ಈಗಾಗಲೇ ಪೂರ್ಣಗೊಂಡಿದ್ದು, ಯಾವುದೇ ಹಣ ಬಿಡುಗಡೆ ಮಾಡುವ ಪ್ರಸ್ತಾವನೆ ಇರುವುದಿಲ್ಲ. |
| ಇ) | ಈ ಯೋಜನೆಯಡಿ ಸ್ಥಾಪಿಸಲಾದ ನೂತನ ಬ್ಯಾರೇಜ್‌ನ ಬಾಗಿಲುಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿವೆಯೇ: ಅವುಗಳಿಂದ ಹಿನ್ನೀರು ನಿಲ್ಲಿಸಲು ನೆರವಾಗುತ್ತಿದೆ ಎಂಬುದು ತಾಂತ್ರಿಕವಾಗಿ ದೃಢಪಡಿಸಲಾಗಿದೆಯೇ: | ಸದರಿ ಬ್ಯಾರೇಜಿಗೆ 2012ರಲ್ಲಿ ಗೋಡಬೋಲೆ ಗೇಟುಗಳನ್ನು ಅಳವಡಿಸಲಾಗಿದ್ದು, ಕಾಮಗಾರಿಯ ನಿರ್ಮಾಣ ಹಂತದಲ್ಲಿಯೇ ಗುಣಮಟ್ಟವನ್ನು ಪರಿಶೀಲಿಸಲಾಗಿರುತ್ತದೆ. ಪ್ರಸ್ತುತ, ಬ್ಯಾರೇಜ್‌ನ ಗೋಡಬೋಲೆ ಗೇಟುಗಳ ಕೆಳಗೆ ನೀರು ಸೋರಿಕೆಯಾಗುತ್ತಿದ್ದು, ಬ್ಯಾರೇಜಿನ ಪೂರ್ಣ ಸಾಮರ್ಥ್ಯದ ನೀರು ಶೇಖರಿಸಲು ಸಾಧ್ಯವಾಗುತ್ತಿಲ್ಲ. |
| ಈ). | ಈ ಬ್ಯಾರೇಜಿನಿಂದ ಎಷ್ಟು ಹೆಕ್ಟರ್ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ಈಗಾಗಲೇ ಎಷ್ಟು ಭೂಮಿಗೆ ನೀರು ಹರಿಯುತ್ತಿದೆ. ಯೋಜನೆಯಿಂದ ಎಷ್ಟು ರೈತರು ನೇರವಾಗಿ ಲಾಭ ಪಡೆಯುತ್ತಿದ್ದಾರೆ. | ಸದರಿ ಯೋಜನೆಯು ಬ್ಯಾರೇಜಿನಲ್ಲಿ ಸಂಗ್ರಹವಾಗುವ ಹಿನ್ನೀರನ್ನು ರೈತರು ತಮ್ಮ ಸ್ವಂತ ಪಂಪ್ ಸೆಟ್ ಅಳವಡಿಸಿಕೊಂಡು, ನೀರಾವರಿಗೆ ಬಳಸಿಕೊಳ್ಳುವ ಯೋಜನೆಯಾಗಿರುತ್ತದೆ. ಸದರಿ ಯೋಜನೆಯಡಿ, ಸುಮಾರು 113 ರೈತರು ನೀರನ್ನು ಉಪಯೋಗಿಸುತ್ತಿದ್ದು, ಇದರಿಂದ 851 ಹೆಕ್ಟೇರ್ 07 ಗುಂಟೆ ನೀರಾವರಿ ಸೃಜನೆಗೊಂಡಿರುತ್ತದೆ. |
| ಉ) | ಈ ಯೋಜನೆಯಡಿ ಎಷ್ಟು ಎಕರೆ ಭೂಮಿ ವಶಪಡಿಸಿಕೊಳ್ಳಲಾಗಿದೆ. ರೈತರಿಗೆ ಪರಿಹಾರ ಧನ ನೀಡಲಾಗಿದೆಯೇ: ರೈತರಿಗೆ ನೀಡಲಾದ ಹಾಗೂ ಬಾಕಿ ಇರುವ ಪರಿಹಾರ ಧನ ಎಷ್ಟು: | ಸದರಿ ಯೋಜನೆಯಡಿ 11 ಎಕರೆ 10 ಗುಂಟೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದ್ದು, 2006ರಲ್ಲಿ ಅಂದಿನ ಮಾರುಕಟ್ಟೆ ಬೆಲೆಗೆ ಅನುಗುಣವಾಗಿ ರೂ.8.00 ಲಕ್ಷ ಭೂಪರಿಹಾರ ಮೊತ್ತವನ್ನು ರೈತರಿಗೆ ಪಾವತಿಸಲಾಗಿರುತ್ತದೆ. ಭೂಸ್ವಾಧೀನ ಪರಿಹಾರ ಬಾಕಿ ಇರುವುದಿಲ್ಲ. |
| ಊ) | ಈ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರ ಯಾರು: ಟೆಂಡರ್ ಪ್ರಕ್ರಿಯೆ ಪಾರದರ್ಶಕವಾಗಿತ್ತೆ: ಕಾಮಗಾರಿಯ ಗುಣಮಟ್ಟವನ್ನು ಪರೀಕ್ಷಿಸಲು ಸರ್ಕಾರ ಯಾವ ತಾಂತ್ರಿಕ ಸಂಸ್ಥೆಯಿಂದ ವರದಿ ಪಡೆದುಕೊಂಡಿದೆ? (ಟೆಂಡರ್ ಪ್ರಕ್ರಿಯೆ ಕುರಿತು ಮಾಹಿತಿ ಒದಗಿಸುವುದು) | ಸದರಿ ಬ್ಯಾರೇಜ್ ನಿರ್ಮಾಣದ ಕಾಮಗಾರಿಯನ್ನು M/s. Mysore Construction Company (Proprietor: Mycon Const. Ltd. Bengaluru) ರವರಿಗೆ ಗುತ್ತಿಗೆ ಆಧಾರದ ಮೇಲೆ ವಹಿಸಲಾಗಿದ್ದು, ನಿರ್ಮಾಣದ ಹಂತದಲ್ಲಿಯೇ ಕಾಮಗಾರಿಯ ಗುಣಮಟ್ಟವನ್ನು ಕೃಷ್ಣಾ ಭಾಗ್ಯ ಜಲ ನಿಗಮದ ಗುಣ ನಿಯಂತ್ರಣ ಕಚೇರಿಯಿಂದ ಪರಿಶೀಲಿಸಿ, ಕಾಮಗಾರಿಯನ್ನು 2012ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗಿರುತ್ತದೆ. |

**ಸಂಖ್ಯೆ:ಜಸಂಇ 116 ಎಂಎಲ್ಎ 2025**

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**